ಇವೆಲ್ಲವನ್ನೂ ಕಣ್ಣಾರೆ ನೋಡುವ ಅವಕಾಶವಿಲ್ಲವೆಂದು ನನ್ನ ಹೃದಯ ಮರುಗುತ್ತದೆ. ಸ್ಪರ್ಶ ಮಾತ್ರದಿಂದಲೇ ಇಷ್ಟು ಸುಂದರವಿರುವ ಜಗತ್ತು ಬಣ್ಣಗಳೊಂದಿಗೆ ನೋಡಲು ಸಾಧ್ಯವಾದರೆ ಅದೆಷ್ಟು ಚಂದವಿರಬಹುದು? ಆದರೆ ಕಣ್ಣಿರುವವರೆಲ್ಲ ಇವೆಲ್ಲವನ್ನು ಸಾಮಾನ್ಯ ಸಂಗತಿ ಎಂಬಂತೆ ಕಡೆಗಣಿಸುತ್ತಾರೆ. ತನಗಿರುವ ಭಾಗ್ಯಗಳ ಬಗ್ಗೆ ಸಂತೋಷಪಡದೇ ಸದಾ ಇಲ್ಲದಿರುವುದರ ಬಗ್ಗೆ ಚಿಂತಿಸುವುದು ಮನುಷ್ಯನ ಸ್ವಭಾವವೇ ಆಗಿಬಿಟ್ಟಿದೆ ಅನಿಸುತ್ತದೆ. ಜೀವನದ ಪರಿಪೂರ್ಣತೆಗಾಗಿ ಬಳಸಬಲ್ಲ ಇಂಥದೊಂದು ಭಾಗ್ಯವನ್ನವರು ಕೇವಲ ಅವಶ್ಯಕತೆಗಾಗಿ ಮಾತ್ರವೇ ಬಳಸುತ್ತಿರುತ್ತಾರೆ.

ನಾನೇನಾದರೂ ವಿಶ್ವವಿದ್ಯಾಲಯದ ಕುಲಪತಿಯಾದರೆ 'ನಿಮ್ಮ ಕಣ್ಣುಗಳನ್ನು ಬಳಸುವುದು ಹೇಗೆ?' ಎಂಬ ಕೋರ್ಸನ್ನು ಎಲ್ಲ ವಿದ್ಯಾರ್ಥಿಗಳಿಗೆ ಕಡ್ಡಾಯಗೊಳಿಸುತ್ತೇನೆ. ಈ ಕೋರ್ಸಿನಲ್ಲಿ ನಮ್ಮ ಸುತ್ತಲಿರುವ ನಮ್ಮ ಗಮನಕ್ಕೆ ಬಾರದ ಸಂಗತಿಗಳನ್ನು ಗಮನಿಸುವುದು ಹೇಗೆಂಬ ಬಗ್ಗೆ ವಿದ್ಯಾರ್ಥಿಗಳಿಗೆ ತರಬೇತಿಯ ವ್ಯವಸ್ಥೆ ಮಾಡುತ್ತೇನೆ. ಸುಪ್ತ ಮತ್ತು ಜಡವಾಗಿರುವ ಎಲ್ಲ ಸಹೋದ್ಯೋಗಿಗಳನ್ನು ನಿದ್ದೆಯಿಂದ ಬಡಿದೆಬ್ಬಿಸುತ್ತೇನೆ. ಈ ವಿಷಯದ ಬಗ್ಗೆ ಹೇಳಲು ನನಗೆ ಬಹಳ ಅರ್ಹತೆಯಿದೆ ಎಂದುಕೊಳ್ಳುವೆ. ನನಗೇನಾದರೂ ದೃಷ್ಟಿ ಬಂದರೆ ಕಾಯಂ ಆಗಿಯಲ್ಲವಾದರೂ ಕೇವಲ ಮೂರು ದಿನಗಳ ಮಟ್ಟಿಗೆ ನನಗೆ ಈ ಜಗತ್ತನ್ನು ನೋಡಲು ಸಾಧ್ಯವಾದರೆ ನಾನು ಏನೆಲ್ಲವನ್ನು ಮಾಡುತ್ತೇನೆಂಬ ಬಗ್ಗೆ ನಿಮಗೆ ವಿವರಿಸುತ್ತೇನೆ. ಅದೇ ಸಮಯದಲ್ಲಿ ನೀವೂ ಒಂದು ಪ್ರಯೋಗ ಮಾಡಬಹುದು. ಇಂದಿನ ರಾತ್ರಿ ಮಲಗಿದ ಮೇಲೆ ನಾಳೆಯ ಸೂರ್ಯನ ಬೆಳಕು ನಿಮಗೆ ಕಾಣುತ್ತಿಲ್ಲವೆಂದುಕೊಳ್ಳಿ, ಮೂರು ದಿನಗಳ ಕಾಲ ನಿಮ್ಮ ದೃಷ್ಟಿ ಹೊರಟುಹೋದರೆ ನಿಮ್ಮ ಬದುಕಿನಲ್ಲಿ ಏನೆಲ್ಲ ಘಟಿಸಬಹುದು ಎಂಬುದನ್ನು ಊಹಿಸಿಕೊಳ್ಳಿ. ಈ ಆಟ ನಿಜಕ್ಕೂ ಮಜವಾಗಿರುತ್ತದೆ.

ಪವಾಡಸದೃಶವಾಗಿ ನನಗೇನಾದರೂ ಮೂರು ದಿನಗಳ ಕಾಲ ದೃಷ್ಟಿ ಬಂದರೆ ನಾನು ಆ ಅವಧಿಯನ್ನು ಮೂರು ಭಾಗಗಳಾಗಿ ಮಾಡಿಕೊಳ್ಳುತ್ತೇನೆ. ಮೊದಲ ದಿನ ನಾನು ನನ್ನ ಜೀವನವನ್ನು ಇದುವರೆಗೂ ತಮ್ಮ ಕರುಣೆ, ಮೃದುತ್ವ ಮತ್ತು ಸಾಂಗತ್ಯದಿಂದ ಸಹ್ಯವಾಗಿಸಿರುವ ನನ್ನೆಲ್ಲ ಆತ್ಮೀಯರನ್ನು ನೋಡಬಯಸುತ್ತೇನೆ. ಮೊದಲಿಗೆ ನನ್ನ ಗುರುಗಳಾದ ಆನ್ ಸುಲಿವಾನ್ ಅವರ ಮುಖವನ್ನು ನೋಡಬೇಕು. ನಾನು ತೀರ ಚಿಕ್ಕವಳಾಗಿದ್ದಾಗ ನಮ್ಮ ಮನೆಗೆ ಬಂದ ಅವರು ನನಗೆ ಹೊರಜಗತ್ತಿನ ಕಿಟಕಿಗಳನ್ನು ತೆರೆದವರು. ನಾನವರ ಮುಖದ ಚಹರೆಗಳನ್ನು ಮಾತ್ರವೇ ನೋಡಬಯಸುವುದಿಲ್ಲ, ಅದು ಸ್ಪರ್ಶದಿಂದ ಈಗಾಗಲೇ ನನ್ನ ಮನಸ್ಸಿನಲ್ಲಿ ಅಚ್ಚಾಗಿದೆ. ಕಣ್ಣು ಕಾಣಿಸದ, ಕಿವಿ ಕೇಳಿಸದ ನನಗೆ ಶಿಕ್ಷಣ ನೀಡುವಲ್ಲಿ ಅವರು ತೋರಿದ ಅಸಾಧಾರಣ ಸಹನೆ ಮತ್ತು ಅಪರಿಮಿತ ಅನುಕಂಪದ ಸಾಕ್ಷಿಗಳನ್ನು ಅವರ ಮುಖದಲ್ಲಿ ನಾನು ಹುಡುಕಬೇಕಿದೆ. ಅವರ ಕಣ್ಣುಗಳ ಬೆಳಕಲ್ಲಿರುವ ಶುದ್ಧ ಚಾರಿತ್ರ್ಯ ಮತ್ತು ಎಂತಹ ಕಠಿಣ ಸನ್ನಿವೇಶದಲ್ಲಿಯೂ ಧೃತಿಗೆಡದೇ ನನ್ನ ಜತೆ ನಿಂತಿರುವ ಮಾನವೀಯತೆಯ ಅಲೆಗಳನ್ನು ನಾನು ನೋಡಬೇಕಿದೆ.

ನನ್ನ ಸ್ನೇಹಿತರ ಹೃದಯದಲ್ಲಿರುವ ಪ್ರೀತಿಯ ಒರತೆಯನ್ನು ಅವರ ಕಣ್ಣುಗಳ ಮೂಲಕವಲ್ಲದೇ ಬೇರೆ ಹೇಗೆ ಗ್ರಹಿಸಬಲ್ಲೆ? ಕಣ್ಣುಗಳನ್ನು ಆತ್ಮದ ಕಿಟಕಿಗಳು ಎನ್ನುತ್ತಾರೆ. ಕೇವಲ ನನ್ನ ಬೆರಳುಗಳ ಸ್ಪರ್ಶದಿಂದ ಮಾತ್ರವೇ ನಾನವರ ಮುಖದ ಚಹರೆಗಳನ್ನು ಗ್ರಹಿಸಿರುವೆ. ನಗು, ಕೋಪ, ತಮಾಷೆ ಇವುಗಳೆಲ್ಲವನ್ನೂ ನಾನು ಮುಖದ ಚಹರೆಗಳಿಂದಲೇ ಗ್ರಹಿಸಬಲ್ಲೆ. ಬಂದವರು ಯಾರೆಂಬುದನ್ನೂ ನಾನು ಮುಟ್ಟಿಯೇ ಗ್ರಹಿಸುತ್ತೇನೆ. ಅವರು ನನ್ನ ಬಗೆಗೆ ತೋರುವ ಪ್ರತಿಕ್ರಿಯೆಗಳಿಂದಲೇ ನನಗೆ ಅವರನ್ನು ಚಿತ್ರಿಸಿಕೊಳ್ಳಲು ಸಾಧ್ಯವಾಗಿದೆ. ಆದರೂ ಅವರೊಂದಿಗೆ ಮಾತನಾಡುವಾಗ ಅವರ ಕಣ್ಣುಗಳು ಹೊರಸೂಸುವ ಆ ಕ್ಷಣದ ಪ್ರತಿಕ್ರಿಯೆಗಳನ್ನು ಕಣ್ಣಾರೆ ನೋಡಲು ನಾನು ಕಾತರಳಾಗಿದ್ದೇನೆ. ನನ್ನ ಆತ್ಮೀಯ ಗೆಳತಿಯರ ಬಗ್ಗೆ ನನಗೆ ಸಂಪೂರ್ಣವಾದ ಅರಿವಿದೆ. ಅಪರೂಪಕ್ಕೆ ಭೇಟಿಯಾಗುವವರ ಬಗ್ಗೆ ಅಷ್ಟೇನನ್ನೂ ತಿಳಿದುಕೊಳ್ಳಲು ನನಗೆ ಸಾಧ್ಯವಾಗಿಲ್ಲ. ದೃಷ್ಟಿಯಿರುವವರಿಗೆ ಅದು ಎಷ್ಟು ಸುಲಭದ ಕೆಲಸ! ಮಾತನಾಡುವವರ ಮುಖಭಾವವನ್ನು ಕ್ಷಣಮಾತ್ರದಲ್ಲಿ ಗ್ರಹಿಸಿ ಅವರ ಒಳಗನ್ನು ಅರಿಯಬಹುದು. ಆದರೆ ಈ ರೀತಿಯ ಗ್ರಹಿಕೆಯನ್ನು ದೃಷ್ಟಿಯಿರುವ ಅನೇಕರು ಹೊಂದಿಲ್ಲವೆಂಬುದು ನನಗೆ ಗೊತ್ತು. ಸ್ನೇಹಿತರ